# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 55/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 22-12-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಆನಂದ ದೋಣಿ | **ಪ್ರಾ.ಸಾ ಃ 10** |
| **ತಂದೆ ಃ ಗಂಡ ಹೆಸರು** | ಃ | ಅಪ್ಪಣ್ಣಾ | **ಚಾ.ಸಾ ಃ 11** |
| **ವಯಸ್ಸು** | ಃ | 44 ವರ್ಷ | |
| **ಉದ್ಯೋಗ** | ಃ | ಪೋಲೀಸ ನೀರಿಕ್ಷಕರು,<br>ಲೋಕಾಯುಕ್ತ, ವಿಜಯಪುರ | |
| **ವಾಸಸ್ಥಳ** | ಃ | ವಿಜಯಪುರ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನಾನು ದಿನಾಂಕ 29.09.2017 ರಿಂದ 12.10.2019 ರವರೆಗೆ ಕಲಘಟಗಿ ಪೋಲೀಸ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯನಿರ್ವಹಿಸಿದ್ದೇನೆ.

ದಿನಾಂಕ 12.10.2017 ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-10 ರವರಿಂದ ವಹಿಸಿಕೊಂಡು ದಿನಾಂಕ 11.10.2017 ರಂದು ಎಸ್ ಬಿ ಎಂ ಶಾಖೆ ಕಲಘಟಗಿಯವರಿಗೆ 1 ನೇ ಆರೋಪಿಯು ಸಾಲ ಪಡೆದುಕೊಳ್ಳಲು ಸಲ್ಲಿಸಿದ ದಾಖಲೆಗಳನ್ನು ಹಾಜರ ಪಡೆಸುವಂತೆ ನೋಟೀಸ ನೀಡಿರುತ್ತೇನೆ. ಚಾಸಾ-1 ರವರು ದಿನಾಂಕ 31.10.2017 ರಂದು ದಾಖಲೆಗಳನ್ನು ಹಾಜರ ಪಡಿಸಿದ್ದು ಅವುಗಳನ್ನು ನಿಪಿ-2 ರಂತೆ ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಜಪ್ತಿ ಪಡಿಸಿಕೊಂಡಿರುತ್ತೇನೆ. ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-45 ರವರೆಗೆ ಜರುಗಿಸಿದ್ದು, ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ-3 ರಿಂದ 13 ದಾಖಲೆಗಳನ್ನು ನಿಪಿ-14 ರಂತೆ ಫೋಟೋ ತೆಗೆಸಿರುತ್ತೇನೆ. ದಿನಾಂಕ ಚಾಸಾ-9 ರವರಿಗೆ ಭಾಗ್ಯಲಕ್ಷ್ಮಿ ಮೋಟರ್ಸ ವಹಿವಾಟ ಕುರಿತು ದಾಖಲೆಗಳನ್ನು ಸಲ್ಲಿಸುವಂತೆ ಮನವಿ ಸಲ್ಲಿಸಿರುತ್ತೇನೆ. ಸದರಿಯವರು ನಿಪಿ-27 ರಂತೆ ವರದಿ ಸಲ್ಲಿಸಿರುತ್ತಾರೆ. ನಿಪಿ-27 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು. ಕಾರ್ಪೋರೇಷನ ಬ್ಯಾಂಕ ಧಾರವಾಡ ಶಾಖೆಯವರಿಗೆ ಬ್ಯಾಂಕ ಖಾತೆ ದಾಖಲೆ ಪೂರೈಸುವಂತೆ ಕೋರಿದ್ದು ನಿಪಿ-25 ರಂತೆ ಸ್ಟೇಟಮೆಂಟ್ ಹಾಜರ ಪಡಿಸಿರುತ್ತಾರೆ. ಚಾಸಾ-1 ರವರಿಗೆ ನೋಟೀಸ ನೀಡಿ ಸಾಲದ ಖಾತೆಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರ ಪಡಿಸುವಂತೆ ಕೋರಿದ್ದು ಅವರು ದಾಖಲೆಗಳನ್ನು ಪೂರೈಸಿದ್ದು ದಾಖಲೆಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ 05.05.2019 ರಂದು ಚಾಸಾ-1 ರವರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 12.07.2019 ರಂದು 1 ನೇ ಆರೋಪಿಯನ್ನು ಬಂಧಿಸಿ ನ್ಯಾಯಾಲಯ ಬಂಧನಕ್ಕೆ ಒಪ್ಪಿಸಿರುತ್ತೇನೆ. ಅದೇ ದಿನ ಸದರಿಯವರ ಸ್ವಖುಷಿ ಹೇಳಿಕೆ

ಪಡೆದಿರುತ್ತೇನೆ. ದಿನಾಂಕ 31.10.2017 ರಂದು ಚಾಸಾ-3 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ ದಿನಾಂಕ 05.05.2019 ರಂದು ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 31.10.2017 ರಂದು ಚಾಸಾ-6 ರವರ ಹೇಳಿಕೆ ಹಾಗೂ ದಿನಾಂಕ 05.05.2019 ರಂದು ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 02.05.2019 ರಂದು ಚಾಸಾ-8 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಚಾಸಾ-8 ರವರಿಂದ ಆರೋಪಿತರ ಕುರಿತಾದ ದಾಖಲೆಗಳನ್ನು ಪಡೆದುಕೊಂಡು ಅದಕ್ಕೆ ಸಂಬಂಧಿಸಿದಂತೆ ಹೇಳಿಕ ಪಡೆದುಕೊಂಡಿರುತ್ತೇನೆ. ದಿನಾಂಕ 23.08.2019 ರಂದು ಚಾಸಾ-7 ರವರು 3 ನೇ ಆರೋಪಿಯ ಸೇವಾ ವಿವರ ಕೋರಿ ಮನವಿ ಸಲ್ಲಿಸಿ ಅವರಿಂದ ವರದಿ ಪಡೆದುಕೊಂಡಿದ್ದು ಹೇಳಿಕೆ ಪಡೆದಿರುತ್ತೇನೆ.

3 ನೇ ಆರೋಪಿಯು ಧಾರವಾಡ ಕಾರ್ಪೋರೇಷನ ಬ್ಯಾಂಕ ಶಾಖೆಯಲ್ಲಿ ಭಾಗ್ಯಲಕ್ಷ್ಮಿ ಮೋಟರ್ಸ ಪ್ರೊಪರ್ಯೆಟರ ಎಂದು 2 ನೇ ಆರೋಪಿ ಇವರ ಹೆಸರಿನ ನಕಲಿ ಖಾತೆಯಿಂದ ಗೊತ್ತಿದ್ದರೂ ಕೂಡಾ 3 ನೇ ಆರೋಪಿಯು ಸಾಲದ ಹಣವನ್ನು ಸದರಿಯವರ ಖಾತೆಗೆ ಜಮಾ ಮಾಡಿರುತ್ತಾರೆ. 2 ನೇ ಆರೋಪಿಯ ಖಾತೆ ಹಣವನ್ನು ಆರೋಪಿತರು ಮೋಸದಿಂದ ಪಡೆದುಕೊಂಡಿರುತ್ತಾರೆ. ಆರೋಪಿತರು ಮೇಲ್ನೋಟಕ್ಕೆ ಅಪರಾದ ಮಾಡಿದ್ದಾರೆಂದು ತನಿಖೆಯಿಂದ ಕಂಡು ಬಂದಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ. ನಾನು ಬಂಧಿಸಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 3 ನೇ ಆರೋಪಿತರ ಪರ ವಕೀಲರಿಂದಃ**

ನಾನು ಎರಡು ರೀತಿಯಲ್ಲಿ ಕನ್ನಡ ಹಾಗೂ ಇಂಗ್ಲೀಷನಲ್ಲಿ ಸಹಿ ಮಾಡಿರುತ್ತೇನೆ. ಈ ಬಗ್ಗೆ ಪ್ರಮಾಣ ಪತ್ರ ಹಾಜರ ಪಡಿಸಿಲ್ಲ. ದೋಷಾರೋಪಣ ಪಟ್ಟಿಯಲ್ಲಿ ಕನ್ನಡ ಹಾಗೂ ಪಂಚನಾಮೆಯಲ್ಲಿ ಇಂಗ್ಲೀಷನಲ್ಲಿ ಸಹಿ ಮಾಡಿದ್ದು ಎರಡು ಸಹಿಗಳು ನನ್ನದೆ ಇರುತ್ತದೆ. ದಾಖಲೆಗಳಲ್ಲಿರುವ ಸಹಿಗಳು ನನಗೆ ಸೇರಿದ್ದಲ್ಲ ಅಂದರೆ ಸರಿಯಲ್ಲ. ನಾನು ಎರಡು ರೀತಿಯ ಸಹಿ ಮಾಡುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಿಪಿ-1 ರಲ್ಲಿ 3 ನೇ ಆರೋಪಿಯ ಹೆಸರು ಇರುವುದಿಲ್ಲ ಅಂದರೆ ನಿಜ. ಆರೋಪಿತರ ಸ್ವಖುಷಿ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರು ನನ್ನ ಸಮಕ್ಷಮ ಯಾವುದೆ ಹೇಳಿಕೆಗಳನ್ನು ನೀಡಿಲ್ಲ ಅಂದರೆ ಸರಿಯಲ್ಲ. ಚಾಸಾ-4 ಮತ್ತು 5 ರವರು ಸರಕಾರಿ ನೌಕರರು ಅಂದರೆ ನಿಜ. ಚಾಸಾ-2 ಮತ್ತು 3 ರವರು ಕರ್ತವ್ಯ ಮುಗಿಸಿಕೊಂಡು ಬಂದಿದ್ದರು. ಚಾಸಾ-4 ಮತ್ತು 5 ರವರು ಮೇಲಾಧಿಕಾರಿಗಳ ಅನುಮತಿ ಪಡೆದುಕೊಂಡ ಬಗ್ಗೆ ದಾಖಲೆ ಪಡೆದುಕೊಂಡಿಲ್ಲ. ಚಾಸಾ-1 ರವರು ದಾಖಲೆಗಳನ್ನು ಹಾಜರ ಪಡಿಸುವಾಗ ಮೇಲಾಧಿಕಾರಿಗಳಿಂದ ಅನುಮತಿ ಪಡೆದುಕೊಂಡಿದ್ದರು ಎನ್ನುವ ವಿಷಯ ನನ್ನ ವ್ಯಾಪ್ತಿಗೆ ಬರುವುದಿಲ್ಲ. ಸಾಕ್ಷಿ

ಮುಂದುವರೆದು ಚಾಸಾ-1 ರವರು ನಾನು ನೀಡಿದ ನೋಟೀಸಗೆ ಉತ್ತರವಾಗಿ ಹಾಜರ ಪಡಿಸಿದ್ದು ಸದರಿಯವರು ಮೇಲಾಧಿಕಾರಿಗಳ ಅನುಮತಿ ಪಡೆದುಕೊಂಡಿರುವುದು ನನಗೆ ಗೊತ್ತಿಲ್ಲ. ಚಾಸಾ-1 ರವರ ಹೇಳಿಕೆಯನ್ನು ನಾನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ.

ಚಾಸಾ-1 ರವರು ಹಾಜರ ಪಡಿಸಿದ ದಾಖಲೆಗಳು ದೃಡಿಕೃತ ಪ್ರತಿಗಳು ಎನ್ನುವ ಬಗ್ಗ ದೃಡಿಕರಣ ಇರುವುದಿಲ್ಲ ಅಂದರೆ ನಿಜ. ಮೂಲ ಪ್ರತಿಗಳ ದೃಡಿಕೃತ ಪ್ರತಿಗಳು ಎಂದು ನಾನು ದಾಖಲೆಗಳ ಮೇಲೆ ದೃಡಿಕರಿಸಿಲ್ಲ ಅಂದರೆ ನಿಜ. ನಿಪಿ-13 ಮತ್ತು 27 ರ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ದೃಡಿಕೃತ ಪ್ರತಿಗಳು ಎಂದು ದೃಡಿಕರಣ ಮಾಡಿಲ್ಲ ಅಂದರೆ ನಿಜ. ಸಾಕ್ಷಿ ಮುಂದುವರೆದು ಬ್ಯಾಂಕ ಗಣಕಿಕೃತ ದಾಖಲೆ ಆಗಿದ್ದು ಅವುಗಳನ್ನು ದೃಡಿಕರಣ ಮಾಡಲು ಬರುವುದಿಲ್ಲ ಎಂದು ಬ್ಯಾಂಕ ಅಧಿಕಾರಿಗಳು ತಿಳಿಸಿದ್ದಾರೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ನಾನು ಬ್ಯಾಂಕ ಅಧಿಕಾರಿಗಳು ಈ ರೀತಿ ಹೇಳಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ತನಿಖಾ ಹಂತದಲ್ಲಿ ಬ್ಯಾಂಕಿಗೆ ಭೇಟಿ ನೀಡಿರುತ್ತೇನೆ. ಬ್ಯಾಂಕಿನಲ್ಲಿರುವ ಸಿ ಸಿ ಟಿವಿ ಗಳನ್ನು ಗಮನಿಸಿರುವುದು ಈಗ ನನಗೆ ನೆನಪಿಲ್ಲ.

3 ನೇ ಆರೋಪಿ ಬ್ಯಾಂಕ ಮ್ಯಾನೇಜರ ಅಂದರೆ ನಿಜ. 3 ನೇ ಆರೋಪಿಗೆ ಮೇಲಾಧಿಕಾರಿಗಳು ಎಸ್ ಬಿ ಐ ಲೈಫ ಇನಸೂರೆನ್ಸ ಬಗ್ಗ ಜಾಹಿರಾತು ನೀಡಿ ಇಂತಿಷ್ಟು ಪ್ರಕರಣಗಳನ್ನು ಮಾಡಬೇಕೆಂದು ಗುರಿ ನಿಗದಿಪಡಿಸಿರುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ. 3 ನೇ ಆರೋಪಿ ಲೈಫ ಇನಸೂರೆನ್ಸ ಪಾಲಿಸಿ ಮಾಡಿಸಿದರೆ ಅವರಿಗೆ ಬ್ಯಾಂಕಿನಿಂದ ಕಮೀಷನ ಬರುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ಪಾಲಿಸಿದಾರರು ಮೋಸ ಆದರೆ 15 ದಿನಗಳಲ್ಲಿ ಅವುಗಳನ್ನು ಹಿಂಪಡೆದುಕೊಳ್ಳಲು ಅವಕಾಶ ಇದೆ ಎನ್ನುವದು ನನಗೆ ಗೊತ್ತಿಲ್ಲ. 1 ರಿಂದ 1 ನೇ ಆರೋಪಿಯು ತನಗೆ ಮೋಸ ಮಾಡಿ 3 ನೇ ಆರೋಪಿ ಪಾಲಿಸಿ ಮಾಡಿಸಿಕೊಂಡಿದ್ದಾರೆ ಯಾವುದೆ ದೂರು ಸಲ್ಲಿಸಿಲ್ಲ. 3 ನೇ ಆರೋಪಿ ಯಾವುದೆ ತಪ್ಪು ಮಾಡಿಲ್ಲ ಎನ್ನುವದು ನನಗೆ ಕಂಡುಬಂದಿದ್ದರೂ ಕೂಡಾ ಅವರು ನನ್ನ ಮಾತು ಕೇಳದೆ ಇದ್ದುದರಿಂದ ಆರೋಪಿಯನ್ನಾಗಿ ಮಾಡಿದ್ದೇನೆ ಅಂದರೆ ಸರಿಯಲ್ಲ. 3 ನೇ ಆರೋಪಿಯ ಕೃತ್ಯದಲ್ಲಿ ಯಾವುದೆ ಅಪರಾಧಿಕ ಉದ್ದೇಶ ಕಂಡುಬರುವುದಿಲ್ಲ ಕೇವಲ ತನ್ನ ಕತ್ಯವದಿಂದ ವಿಮುಖರಾಗಿದ್ದಾರೆ ಎನ್ನುವದು ಮಾತ್ರ ಕಂಡುಬರುತ್ತದೆ ಅಂದರೆ ಸರಿಯಲ್ಲ. 3 ನೇ ಆರೋಪಿ ನನ್ನ ಮಾತು ಕೇಳದೆ ಇದ್ದುದರಿಂದ ಸದರಿಯವರ ವಿರುದ್ಧ ಆರೋಪಿತರನ್ನಾಗಿ ಮಾಡಿದ್ದೇನೆ ಅಂದರೆ ಸರಿಯಲ್ಲ.

ಬ್ಯಾಂಕ ಮ್ಯಾನೇಜರವರಿಗೆ ಎಷ್ಟು ಮೊತ್ತದವರೆಗೆ ಸಾಲ ಮಂಜೂರು ಮಾಡುವ ಅಧಿಕಾರ ಇರುತ್ತದೆ ಎನ್ನುವ ಬಗ್ಗ ನಾನು ತನಿಖೆ ಮಾಡಿಲ್ಲ. ಆದರೆ ಗಿರಾಕಿಗಳು ತಾವು ಖರೀದಿಸುವ ವಾಹನದ ಮೇಲೆ ಡೌನ ಪೇಮಂಟ್ ಮಾಡುವ ಆಧಾರದ ಮೇಲೆ ಸಾಲ

ಮಂಜೂರು ಮಾಡುತ್ತಾರೆ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. 3 ನೇ ಆರೋಪಿಗೆ ಕೇವಲ 4 ಲಕ್ಷ ರೂ ಮೊತ್ತಕ್ಕೆ ಮಾತ್ರ ಸಾಲ ಮಂಜೂರು ಮಾಡಲು ಅಧಿಕಾರ ಇರುತ್ತದೆ ಹೆಚ್ಚಿನ ಸಾಲ ಕುರಿತು ಮೇಲಾಧಿಕಾರಿಗಳ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ಸಾಲದ ಮೊತ್ತ ರೂ 4 ಲಕ್ಷಕ್ಕೆ ಮೀರಿದರೆ ಮೇಲಾಧಿಕಾರಿಗಳ ಅನುಮತಿಗೆ ಸಲ್ಲಿಸುತ್ತಾರೆ ಅನ್ನುವದು ನನಗೆ ಗೊತ್ತಿಲ್ಲ. 4 ನೇ ಆರೋಪಿಯು 1 ರಿಂದ 3 ನೇ ಆರೋಪಿಯೋಂದಿಗೆ ಶಾಮಿಲಾಗಿ 3 ನೇ ಆರೋಪಿಯ ಹೆಸರಿಗೆ ಆರ್ ಎನ್ ಎಸ್ ಮೋಟರ್ಸ ಹೆಸರಿನ ಖೊಟ್ಟಿ ಖಾತೆ ತೆಗೆದು ಸಾಲದ ಹಣವನ್ನು ಅದಕ್ಕೆ ಹಾಕಿ ಹಣ ಪಡೆದುಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

ಪಂಚನಾಮೆಗೆ ಮುಂಚೆ ಪಂಚರಿಗೆ ನೋಟೀಸ ಕೊಟ್ಟಿಲ್ಲ ಅಂದರೆ ಸರಿಯಲ್ಲ. ನೋಟೀಸನ ಪ್ರತಿಗಳನ್ನು ಹಾಜರ ಪಡಿಸಿಲ್ಲ.

(ಹೆಚ್ಚುವರಿಯಾಗಿ 3 ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದರಿಂದ ಅಳವಡಿಸಿಕೊಳ್ಳಲಾಯಿತು)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.